ದಿನಾಂಕಃ 06-01-2020 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಇವರು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅವರನ್ನು ಪಿ.ಡಬ್ಲೂ-1 ಎಂದು ಪರಿಗಣಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ. ಎಸ್ ಜಿ ಟಿ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಮತ್ತು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದ ಕೂಡಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ, ನೀರಲಗಿ (ಮ.ಅ) ಗ್ರಾಮದ ರಿಸನಂ. 36 ನೇದ್ದಕ್ಕೆ ಸಂಬಂದಿಸಿದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ನೋಟಿಸಿನ ಕಚೇರಿಯ ಪ್ರತಿಯನ್ನು ನಿಪಿ-2 ಎಂದು, ಅಂಚೆ ಸ್ವೀಕೃತಿ ಪ್ರತಿಯನ್ನು ನಿಪಿ-3 ಎಂದು, ಅಂಚೆ ರಸೀದಿಯನ್ನು ನಿಪಿ-4 ಎಂದು, ಪ್ರತಿವಾದಿ ಪರ ವಕೀಲರು ನೀಡಿದ ಪ್ರತ್ಯುತ್ತರ ಪ್ರತಿಯನ್ನು ನಿಪಿ-5 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಶ್ರೀ ಆರ್ ಯು ಪಿ, ವಕೀಲರು ಖರೀದಿ ಕರಾರು ಪತ್ರವನ್ನು ಗುರುತಿಸುವಿಕೆಗೆ ತಕರಾರು ಮಾಡಿದ್ದರಿಂದ ವಾದಿ ಪರ ವಕೀಲರು ಸಮಯವಕಾಶ ಕೇಳಿದ್ದರಿಂದ ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಿದೆ).

ಓ.ಹೇ.ಕೆ.ಸ.ರಿ ಇದೆ ಎಂದು ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ದಿನಾಂಕಃ 06-01-2020 ಹಾನಗಲ್.

ಸಾಕ್ಷಿದಾರರ ಸಹಿ.